# ಯುದ್ಧ ಕಾಲದ ಬೆಳದಿಂಗಳು


ಬೂಟಿನ ಕೆಳಗೆ
ನೆಲ ಸುಟ್ಟು
ಬರಿ ಬೂದಿ

ನೆತ್ತಿ ಮೇಲೆ
ಕಾಳ ಹೊಗೆ ಕರಗಿ
ಶುಭ್ರ ಇರುಳು

ಬಹುಶಃ
ನಮ್ಮ ಪೂರ್ವಿಕರು ಕಂಡ
ಅದೇ ಚುಕ್ಕಿ
ಅದೇ ಚಂದ್ರಮ
ಅದೇ ಆಕಾಶ

ಯುದ್ಧ ಮಗಿದ ಮೇಲೆ ಬರುವ
ಬರಿಗಾಲ ದೇವದೂತರ ಹೊರತು
ಇಲ್ಲಿ ಏನೂ ಬದಲಾಗದು

ಅದಲು ಬದಲಾಗುವುದೇನಿದ್ದರೂ
ಯುದ್ಧದಲಿ ಸೆರೆ ಸಿಕ್ಕ ಖೈದಿಗಳು
ಯುದ್ಧ ಕಾಲದ ಬೆಳದಿಂಗಳು!



ಚಿತ್ರ: ಬಸವರಾಜ ಕಲೆಗಾರ

# ಮಗುವೇ... ಬೆಳ್ಳಕ್ಕಿಗಳೆಲ್ಲಾ ಎಲ್ಲಿಗೆ ಹೊರಟಿವೆ?

ಮಗುವೇ
ನಿನ್ನ ಕುಣಿವ ಅಂಗಾಲಿನ
ಭಾರ ಹೊರುವ
ಕ್ಷಮತೆ
ನನ್ನ ಈ ಒಡಲಿಗಿಲ್ಲ

ಹೂವೇ
ನಿನ್ನ ಚೆಲುವನು ವರ್ಣಿಸುವ
ಎಲ್ಲಾ ಬಣ್ಣಗಳನು
ಈ ಜಗವು ಕಳೆದುಕೊಂಡಿದೆ

ಬುಲೆಟ್ಟಿನ ರಭಸವೇ
ನಿನ್ನ ಕರಾಳತೆಯನು
ಬಯಲು ಮಾಡುವ
ನನ್ನ ಪದಗಳೇ
ಸುಟ್ಟು ಬೂದಿಯಾಗುತ್ತಿವೆ

ನೆತ್ತರಿನ ನಯವಂಚಕ ಮೌನವೇ
ನೀನೇನು ಮಾಡುತ್ತಿರುವೆ
ನಿನ್ನ ನಾಜೂಕತನಕೆ
ನಾನು ಎಲ್ಲಿಂದ ಸಾಕ್ಷಿ ತರಲಿ?

ಮೂರು ಲೋಕದ
ವಿರಹದುರಿಯೇ
ನಿನ್ನ ಪ್ರಾಮಾಣಿಕತೆಗೆ
ನನ್ನ ನಮನಗಳು
ಮುಂಗಾರು ಮಳೆಯಲ್ಲಿ ತೊಯ್ದ
ನಿನ್ನ ಭಾವನೆಗಳನ್ನು
ಈಗ ಎಲ್ಲಿ ಬಚ್ಚಿಡುವೆ?

ಟ್ರಕ್ಕುಗಳಲಿ ಗುಳೆ ಹೋಗುತ್ತಿರುವ ಕನಸುಗಳೇ
ಗೊತ್ತಾಗುತ್ತಿಲ್ಲ
ಈ ಮಾಗಿಯ ಇರುಳಿನಲಿ
ಬೆಳ್ಳಕ್ಕಿಗಳೆಲ್ಲಾ ಎಲ್ಲಿಗೆ ಹೊರಟಿವೆ?

